ಬೆಳಿಗಾರರನ್ನು ಮೆಂಬರ್ ಮಾಡಿಕೊಂಡಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ತಾವು ದಯವಿಟ್ಟು ಅವರೆಲ್ಲರಿಗೂ ಅರ್ಜಿ ಕೊಡುವುದಕ್ಕೆ ಹೇಳಿ. ಯಾರದ್ದಾದರೂ ರಿಜೆಕ್ಟ್ ಮಾಡಿದ್ದಾರೆ ಎಂದು ನನ್ನ ನಜರಿಗೆ ತಂದರೆ ಖಂಡಿತವಾಗಿ ಎಲ್ಲಾ ತೋಟಗಾರಿಕಾ ಬೆಳಿಗಾರರನ್ನು ಮೆಂಬರ್ ಮಾಡುವಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್ : ಈಗ ತೋಟಗಾರಿಕೆ ಬೆಳಿಗಾರರು ಬಹಳಷ್ಟು ಜನ ಇದ್ದಾರೆ. ತೋಟಗಾರಿಕಾ ಬೆಳಿಗಾರರನ್ನು ಮೆಂಬರ್‌ಶಿಪ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಆ ಬೆಳೆಗಳನ್ನು ಬೆಳೆಯುವ ಆ ರೈತರಿಗೆ ಇನ್ನೂ ತೀವ್ರವಾಗಿ ಸಹಾಯ ಮಾಡುವಂಥ ಒಂದು ಸಂಸ್ಥೆ ಆದಾಗಬೇಕಾಗಿದೆ. ಆ ದೃಷ್ಟಿಯಿಂದ ಮೆಂಬರ್‌ಶಿಪ್ ಕಡ್ಡಾಯ ಮಾಡಬೇಕು ಎಂದು ಹೇಳಬೇಕು. ಈಗ ನೋಡಿ, ಅವರು ಪಡೆದಂಥ ತೋಟಗಾರಿಕಾ ಉತ್ಪನ್ನಗಳನ್ನು ಬೇರೆ ಸಾಮಾನ್ಯ ಸದಸ್ಯರಿಂದ ಪಡೆದಿದ್ದಾರೆಯೇ ಹೊರತು ಅವರು ಮೆಂಬರ್‌ಶಿಪ್‌ನಿಂದ ಪಡೆದಿಲ್ಲ. ಆ ದೃಷ್ಟಿಯಿಂದ ಯಾರು ಮೆಂಬರ್ ಇದ್ದಾರೆ ಅವರು ತೋಟಗಾರಿಕೆ ಮಾಡುವಂಥ ಜನರ ಸಲುವಾಗಿ ಇರಬೇಕು. ಅವರ ಉತ್ಪನ್ನಗಳನ್ನು ಖರೀದಿ ಮಾಡಬೇಕು. ಆ ದೃಷ್ಟಿಯಿಂದ ತಮ್ಮ ಪ್ರಯತ್ನ ಈ ಸೊಸೈಟಿಯಿಂದ ಆಗಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಇದುವರೆಗೂ ನಮ್ಮ ಕಡೆಯಂತೂ ಯಾರ ರೈತರೂ ನಮ್ಮನ್ನು ಮೆಂಬರ್ಸ್ ಮಾಡಿಕೊಂಡಿಲ್ಲ ಎಂದು ತಕರಾರು ಮಾಡಿಲ್ಲ. ಯಾವುದಾದರೂ ತಕರಾರು ಇದ್ದರೆ, ಅದನ್ನು ತಿಳಿಸಿದರೆ ಖಂಡಿತ ಅವರನ್ನೆಲ್ಲಾ ಮೆಂಬರ್ಸ್ ಮಾಡಿಸಿಕೊಳ್ಳುವ ವ್ಯವಸ್ಥೆ ಮಾಡುತ್ತೇನೆ. ಮತ್ತೆ ನಾವೂ ಕೂಡ ಮೆಂಬರ್‌ಶಿಪ್ ಡ್ರೈವ್ ತೆಗೆದುಕೊಂಡು ಎಲ್ಲಾ ಜಿಲ್ಲೆಗಳಲ್ಲಿ, ಆಯಾಯ ಏರಿಯಾದಲ್ಲಿ ಇರತಕ್ಕಂಥ ಎಲ್ಲಾ ತೋಟಗಾರಿಕಾ ಬೆಳಿಗಾರರನ್ನು ಮೆಂಬರ್‌ಗಳಾಗಿ ಮಾಡುವಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ : ಕೋಲ್ಡ್ ಸ್ಟೋರೇಜ್ ಬಗ್ಗೆ ಏನು ಹೇಳುತ್ತೀರಿ?

ಅಧ್ಯಕ್ಷರು : ಅವರಾಗಲೇ ಹೇಳಿದರು.

ಅಂಗನವಾಡಿ ಕೇಂದ್ರಗಳಿಗೆ ರಜಾ ಸೌಲಭ್ಯ

361 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕೇಂದ್ರಗಳಿಗೆ ಬೇಸಿಗೆ ಹಾಗೂ ದಸರ ರಜೆ ಕೊಡುವ ಬಗ್ಗೆ ಸರ್ಕಾರದವರು ಪರಿಶೀಲಿಸಿರುವರೆ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ವಿಮಲಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಹೌದು.

ಆ) ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೆಎಟಿಯಿಂದ ತೀರ್ಪು ನೀಡಲಾಗಿರುತ್ತದೆ. ಆದರೆ ಈ ಆದೇಶದ ವಿರುದ್ಧ ಭಾರತ ಸರ್ಕಾರದ ಸೂಚನೆಯಂತೆ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿಯನ್ನು ದಾಖಲು ಮಾಡಲಾಗಿರುತ್ತದೆ. ಇವರಿಗೆ ಬೇಸಿಗೆ ರಜೆ ನೀಡುವ ವಿಷಯದ ಸೇವಾ ವಿಷಯಕ್ಕೆ ಸಂಬಂಧವಿರುತ್ತದೆಯಾದ ಕಾರಣ ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯ ನೀಡುವ ತೀರ್ಪಿನ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಸನ್ಮಾನ್ಯ ಅಧ್ಯಕ್ಷರೇ, ಅಂಗನವಾಡಿ ಕಾರ್ಯಕರ್ತರಿಗೆ ದಸರಾ ರಜೆ ಕೊಡಬೇಕೆಂದು ಕೇಳಿದ್ದೇವೆ. ಸಚಿವರು ಇದರ ಬಗ್ಗೆ ಪತ್ರಿಕೆ ಹೇಳಿಕೆಯನ್ನೂ ಕೂಡ ಕೊಟ್ಟಿದ್ದಾರೆ ಇದನ್ನು ನಾವು ಕನ್ಸಿಡರ್‌ಮಾಡುತ್ತೇವೆ ಎಂದು. ಈಗ ರಜೆ ಕೊಡಬೇಕಾದರೆ ಅವರ ಹುದ್ದೆ ಖಾಯಂ ಆಗಬೇಕು. ಖಾಯಂ ಆಗಿ ಅದು ಸೇವಾ ವಿಷಯಕ್ಕೆ ಸಂಬಂಧಪಟ್ಟ ಕಾರಣ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಉತ್ತರ ಕೊಟ್ಟಿದ್ದಾರೆ. ಆದರೆ ಒಂದು ತಿಳಿದುಕೊಳ್ಳಬೇಕು. ಇದು ಪ್ರಾಥಮಿಕ ಶಿಕ್ಷಣದ ಪೂರ್ವಭಾವಿಯಾಗಿ ಮಕ್ಕಳನ್ನು ತಯಾರು ಮಾಡುವಂಥಾದ್ದು. ಇದು ಅವರ ಬೌದ್ಧಿಕ, ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಬೇಕಾದಂಥ ವ್ಯವಸ್ಥೆ. ಅವರನ್ನು ಒಳ್ಳೆಯ ಮಕ್ಕಳನ್ನಾಗಿ ಮಾಡುವ ದೃಷ್ಟಿಯಿಂದ ಈ ಅಂಗನವಾಡಿ ಕೇಂದ್ರ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಅದರಲ್ಲಿ ಕೆಲಸ ಮಾಡತಕ್ಕಂಥ ಅಂಗನವಾಡಿ ಕಾರ್ಯಕರ್ತರು ಪ್ರಮುಖ ಸ್ಥಾನ ವಹಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಮಕ್ಕಳನ್ನು ದೇವರ ಸಮಾನವೆಂದು ಹೇಳುತ್ತೇವೆ. ಒಳ್ಳೆಯ ಮಕ್ಕಳನ್ನಾಗಿ ನಿರ್ಮಾಣ ಮಾಡಬೇಕಾದರೆ, ಅಂಗನವಾಗಿ ಕೇಂದ್ರದಲ್ಲಿ ಅವರಿಗೆ ಮಾನಸಿಕ, ದೈಹಿಕ ಮತ್ತು ಶಾರೀರಿಕವಾದ ಒಳ್ಳೆಯ ಶಿಕ್ಷಣ ಸಿಕ್ಕಿದರೆ ಮುಂದೆ ಅವರು ಒಳ್ಳೆಯ ಮಕ್ಕಳಾಗಿ ಬೆಳೆಯುವುದಕ್ಕೆ ಸಾಧ್ಯವಿದೆ. ಈ ದೃಷ್ಟಿಯಿಂದ ಅಂಗನವಾಡಿ ಕಾರ್ಯಕರ್ತರನ್ನು ಪರ್ಮನೆಂಟ್ ಮಾಡಬೇಕು ಮತ್ತು ಅವರಿಗೆ ಸೇವಾ ನಿಯಮ ಹೊಂದುವಂತೆ ಮಾಡಬೇಕು. ಇದರ ಬಗ್ಗೆ ತಾವು ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಸೇವಾ ನಿಯಮದ ಬಗ್ಗೆ ಕೇಳಿದ್ದಾರೆ.

ಶ್ರೀಮತಿ ವಿಮಲಬಾಯಿ ದೇಶಮುಖ್ : ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಅಂಗನವಾಡಿ ಕಾರ್ಯಕರ್ತರಿಗೆ ಒಂದು ವರ್ಷಕ್ಕೆ 33ರಷ್ಟು ರಜೆ ಕೊಡಲಾಗುತ್ತಿದೆ. ಈ ಬೇಸಿಗೆ ರಜೆ ಬಗ್ಗೆ ಅದು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ. ಇದು ಕೋರ್ಟಿಗೆ ಹೋದರೆ ಮಾಡಲಿಕ್ಕೆ ಸಾಧ್ಯವಿಲ್ಲ. ಆದಕಾರಣ ನಾವು ಇದನ್ನು ಕ್ಯಾಬಿನೆಟ್ ಮುಂದೆ ತಂದು ಪರಿಶೀಲಿಸಿ ಅವರಿಗೆ ರಜೆ ಮಂಜೂರು ಮಾಡಲು ಪರಿಗಣಿಸುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಬಗ್ಗೆ ಕೆ.ಎ.ಟಿ.ಯಿಂದ ತೀರ್ಪು ನೀಡಲಾಗಿರುತ್ತದೆ ಎಂದು ಹೇಳಿದ್ದೀರಿ. ಈ ತೀರ್ಪಿನ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಅಧ್ಯಕ್ಷರು : ಕೋರ್ಟಿನಿಂದ ಬಂದಿದೆ. ಕ್ಯಾಬಿನೆಟ್ ಮುಂದೆ ಇಟ್ಟು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ವಾಹನಗಳ ಹೊಗೆ ತಪಾಸಣಾ ಕೇಂದ್ರಗಳು

36 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ವಾಹನಗಳ ಹೊಗೆ ತಪಾಸಣಾ ಕೇಂದ್ರಗಳು ಎಷ್ಟಿವೆ?*

ಆ) *ಕಳೆದ ಒಂದು ವರ್ಷದಲ್ಲಿ ಮಿತಿ ಮೀರಿದ ಹೊಗೆಯನ್ನು ಹೊರಸೂಸಿರುವ ಎಷ್ಟು ವಾಹನಗಳನ್ನು ಪತ್ತೆ ಹಚ್ಚಲಾಗಿದೆ?*

ಇ) *ಇದರಿಂದ ಸಂಗ್ರಹವಾದ ದಂಡದ ಒಟ್ಟು ಮೊತ್ತ ಎಷ್ಟು?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಒಟ್ಟು 96 ವಾಹನ ವಾಯು ಮಾಲಿನ್ಯ ಪರೀಕ್ಷಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ರಾಜ್ಯಾದ್ಯಂತ ದಿನಾಂಕ 1.4.1997ರಿಂದ 31.03.1998ರ ಅವಧಿಯಲ್ಲಿ ಮಿತಿ ಮೀರಿದ ಹೊಗೆ ಹೊರಸೂಸುವ 10,602 ವಾಹನಗಳನ್ನು ಪತ್ತೆ ಹಚ್ಚಿ, ಅವುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ.

ಇ) ವಾಯು ಮಾಲಿನ್ಯ ನಿಯಮಾವಳಿಗಳನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ವಿವಿಧ ವಾಹನಗಳ ಮಾಲೀಕರಿಂದ ಕಳೆದ ಒಂದು ವರ್ಷದಲ್ಲಿ ರೂ. 45,725.00 ದಂಡವನ್ನು ನ್ಯಾಯಾಲಯಗಳಲ್ಲಿ ವಸೂಲು ಮಾಡಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ವಾಹನಗಳ ಹೊಗೆ ತಪಾಸಣಾ ಕೇಂದ್ರಗಳು ಎಷ್ಟಿವೆ ಎಂದು ನಾನು ಕೇಳಿದ್ದೇನೆ. ವಾಯು ಮಾಲಿನ್ಯ ನಿಯಂತ್ರಣ ಮಾಡುವುದಕ್ಕೋಸ್ಕರ ಸುಮಾರು96 ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 10,602 ವಾಹನಗಳನ್ನು ಪತ್ತೆಹಚ್ಚಿ 45 ಸಾವಿರ ರೂಪಾಯಿಗಳನ್ನು ನೀವು ವಸೂಲಿ ಮಾಡಿದ್ದೀರಿ. ನನ್ನ ಪ್ರಶ್ನೆ ಏನು ಎಂದರೆ ಈ 96 ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ನೀವು ಪರ್ಮಿಷನ್ ಕೊಟ್ಟಿರುವುದಕ್ಕೆ ಏನು ಕ್ರೈಟೀರಿಯಾ? ಇದು ಮೊದಲನೆಯದು. ಎರಡನೇಯದು, ಈ ಕೇಂದ್ರಗಳು